■ ಹನಿ

# ಗೃಹಸ್ಥನಾದ ಯುವಿ

ಕೊನೆಗೂ ಕ್ರಿಕೆಟ್ಟಿನ ಧ್ರುವತಾರೆ ಯುವಿ ಯ ಮದುವೆಯಾಗಿದೆ. ಈಗಿನ ಜೀವನಶೈಲಿಯ ಲೆಕ್ಕದ ಪ್ರಕಾರ 35 ವರ್ಷ (ಬರ್ತ್‌ಡೇ 12–12–1981) ಮದುವೆಗೆ ತಡವಾದ ವಯಸ್ಸೇನೂ ಅಲ್ಲ. ಆದರೆ ಕ್ರಿಕೆಟ್ ರಂಗದ ಅತ್ಯಂತ ಅರ್ಹ ಬ್ಯಾಚುಲರ್ ಎಂದು ಕಳೆದ ಆರೇಳು ವರ್ಷಗಳಿಂದ ಯುವಿಯನ್ನು ಜನರು ಕರೆಯುತ್ತಿದ್ದುದೂ ಸುಳ್ಳಲ್ಲ. ಯುವಿಯ ಮದುವೆಯ ಕುರಿತು ಜನರಿಗೆ ಹೆಚ್ಚು ಕುತೂಹಲ ಇದ್ದುದರ ಇನ್ನೊಂದು ಕಾರಣವೆಂದರೆ ಬಾಲಿವುಡ್‌ನ ಸುಂದರಿಯರ ಜತೆಗೆ ಯುವಿ ಓಡಾಡುತ್ತಿದ್ದುದು. ಬಾಲಿವುಡ್ ಪಾರ್ಟಿಗಳಲ್ಲಿ ಖದರ್ ಹೆಚ್ಚಿಸುತ್ತಿದ್ದ ಕೆಲವೇ ಕ್ರಿಕೆಟಿಗರ ಪೈಕಿ ಯುವರಾಜ್ ಸಿಂಗ್ ಕೆಲವು ವರ್ಷಗಳಿಂದ ಮುಂಚೂಣಿಯಲ್ಲಿದ್ದುದೂ ಸುಳ್ಳಲ್ಲ.

ಅಂದ ಹಾಗೆ ಯುವಿ ಮದುವೆಯಾದದ್ದು ಅದೇ ಬಾಲಿವುಡ್‌ನ ಬೆಡಗಿ ಹ್ಯಾಝೆಲ್ ಕೀಚ್ ಎಂಬ ಬ್ರಿಟಿಷ್ ಸಂಜಾತೆಯನ್ನು. ಹ್ಯಾಝೆಲ್‌ನ ಅಮ್ಮ ಭಾರತೀಯ ಮೂಲದ ಮಾರಿಷಸ್ ನಿವಾಸಿಯಾಗಿದ್ದಾಕೆ. ತಂದೆ ಅಪ್ಪಟ ಬ್ರಿಟಿಷ್. 'ಈಕೆ ಬಾಲಿವುಡ್‌ನಲ್ಲಿ ಎಲ್ಲಿದ್ದಳು?' ಎನ್ನುವವರೂ ಇದ್ದಾರೆ. ಸಲ್ಮಾನ್ ಖಾನ್ ಅಭಿನಯದ 'ಬಾಡಿಗಾರ್ಡ್' ಚಿತ್ರ ನೋಡಿದವರಿಗೆ ಹ್ಯಾಝೆಲ್ ಪರಿಚಯ ಇದ್ದೇ ಇದೆ. ಚಿತ್ರದ ನಾಯಕಿ ಕರೀನಾ ಕಪೂರ್ ಗೆಳತಿಯಾಗಿ ಇಡೀ ಚಿತ್ರದುದ್ದಕ್ಕೂ ಈಕೆಯಿದ್ದಳು. ದಕ್ಷಿಣದ ಸಿನಿಮಾ ಪ್ರೇಮಿಗಳಿಗೂ ಈಕೆ ಪರಿಚಿತಳೇ. ತೆಲುಗು, ತಮಿಳಿನಲ್ಲಿ ಸೂಪರ್‌ಹಿಟ್ ಆದ 'ಮ್ಯಾಕ್ಸಿಮಮ್' ಚಿತ್ರದ ಹಾಡೊಂದಿದೆ – ಆ ಅಂಟೇ ಅಮಲಾಪುರಂ! ಈ ಹಾಡಿನಲ್ಲಿ ಮೈಚಳಿ ಬಿಟ್ಟು ಕುಣಿದ ಹುಡುಗಿ ಈಕೆಯೇ. ಬರೀ ಇಂಗ್ಲಿಷ್ ಚಿತ್ರಗಳನ್ನು ನೋಡುವವ ರಾಗಿದ್ದರೂ ಈಕೆಯ ಪರಿಚಯ ಇದ್ದೇ ಇರುತ್ತದೆ. 'ಹ್ಯಾರಿ ಪಾಟರ್' ಸರಣಿ ಚಿತ್ರಗಳಲ್ಲಿ 2, 3 ಮತ್ತು 4ನೇ ಚಿತ್ರಗಳಲ್ಲಿ ಈಕೆ ಹೀರೋನ ಗೆಳತಿಯ ಪಾತ್ರದಲ್ಲಿ ನಟಿಸಿದ್ದುಂಟು.

ಹ್ಯಾಝೆಲ್ ಕೀತ್ ಬಾಲಿವುಡ್‌ಗೆ ಬಂದದ್ದೂ ಆಕಸ್ಮಿಕವಾಗಿ. ಚಿಕ್ಕಂದಿನಲ್ಲೇ ಇಂಗ್ಲೆಂಡಿನಲ್ಲಿ ಎಲ್ಲ ತರಹದ ನೃತ್ಯಗಳನ್ನೂ ಕಲಿತಿದ್ದ ಈಕೆ ತಂಡವೊಂದರ ಜತೆ ಪ್ರದರ್ಶನಕ್ಕಾಗಿ ಮುಂಬೈಗೆ ಬಂದದ್ದು 2005ರಲ್ಲಿ. ಭರತನಾಟ್ಯ, ಬ್ಯಾಲೆ, ಕಥಕ್, ಜಾಸ್, ಹಿಪ್‌ಹಾಪ್, ಟ್ಯಾಪ್ ಡ್ಯಾನ್ಸ್ ಮಾತ್ರವಲ್ಲ, ಬೆಲ್ಲಿ ನೃತ್ಯದಲ್ಲೂ ಪರಿಣಿತೆಯಾಗಿದ್ದ ಈಕೆ ಭಾರತದಲ್ಲೇ ಕೆಲಕಾಲ ಉಳಿಯಲು ನಿಶ್ಚಯಿಸಿದ್ದೇ ಬದುಕಿಗೊಂದು ತಿರುವು ನೀಡಿತು. ಬೆಳ್ಳಗೆ ಬೆಳದಿಂಗಳಂತೆ ಮುಖ ವಿದ್ದು ಬಳುಕುವ ದೇಹವಿದ್ದ ಈಕೆಯನ್ನು ಯಾರೋ ಜಾಹೀರಾತಿಗೆ ಕರೆದರು. ಮಾರುತಿ ಸುಝುಕಿ, ವಿವೆಲ್ ಮತ್ತು ಸ್ಪ್ರೈಟ್ ಜಾಹೀರಾತುಗಳಲ್ಲಿ ನಟಿಸಿ ಮಾಡೆಲಿಂಗ್‌ಗೆ ಬಂದ ಬೆಡಗಿ, ಬಾಲಿವುಡ್ ಪ್ರವೇಶಿಸುವುದು ತಡವಾಗಲಿಲ್ಲ. ಬಾಲಿವುಡ್‌ಗೆ ಬಂದ ಮೇಲೆ ಯುವಿಯ ಕಣ್ಣಿಗೆ ಬೀಳದೆ ಇರಲು ಸಾಧ್ಯವೆ? ಕಳೆದ ಎರಡು ಮೂರು ವರ್ಷಗಳಿಂದ ಯುವಿ ಮತ್ತು ಹ್ಯಾಝೆಲ್ ಒಟ್ಟಿಗೇ ಪಾರ್ಟಿ, ಪ್ರವಾಸ ಎಂದು ತಿರುಗಾಡುತ್ತಿದ್ದುದು ಈಗ ಮದುವೆಯಲ್ಲಿ ಮುಕ್ತಾಯ ಕಂಡಿದೆ.

ಯುವರಾಜ್ ಅಂತರ ರಾಷ್ಟ್ರೀಯ ಕ್ರಿಕೆಟ್ ಕಂಡ ಅತ್ಯಂತ ವರ್ಣರಂಜಿತ ಆಟಗಾರ. ನಿಧಾನಗತಿಯ ಟೆಸ್ಟ್ ಪಂದ್ಯಗಳು ಆಕರ್ಷಣೆ ಕಳೆದುಕೊಂಡು ಒಂದು ದಿನದ ಮತ್ತು 20 ಓವರ್ ಪಂದ್ಯಗಳು ಕಳೆ ಪಡೆದುಕೊಂಡ ಹೊತ್ತಲ್ಲೇ ಹೊಡಿಬಡಿಯ ದಾಂಡಿಗ ಯುವರಾಜ್ ಕೂಡಾ ಮಿಂಚತೊಡಗಿದ್ದ. ಅದರಲ್ಲೂ ಎಡಗೈ ಬ್ಯಾಟಿಂಗ್ ಮತ್ತು ಎಡಗೈ ನಿಧಾನಗತಿಯ ಬೌಲಿಂಗ್ ಈತನನ್ನು ಖ್ಯಾತಿಯ ಶಿಖರಕ್ಕೆ ಏರಿಸಲು ಇನ್ನಷ್ಟು ನೆರವಾಯಿತು. ಕೆನ್ಯಾ ವಿರುದ್ಧ 2000ದಲ್ಲಿ ಒಂದುದಿನದ ಕ್ರಿಕೆಟ್‌ಗೆ ಕಾಲಿಟ್ಟ ಯುವಿ ಮೂರು ವರ್ಷಗಳ ಬಳಿಕ ನ್ಯೂಜಿಲಂಡ್ ವಿರುದ್ಧ ಟೆಸ್ಟ್‌ಗೆ ಪಾದಾರ್ಪಣೆ ಮಾಡಿದ. ಆದರೆ ಟೆಸ್ಟ್‌ಗಿಂತ ಹೆಚ್ಚಾಗಿ ಯುವಿ ಕೀರ್ತಿ ಹರಡಿದ್ದು 50 ಓವರ್ ಮತ್ತು 20 ಓವರ್‌ಗಳ ಪಂದ್ಯಗಳಲ್ಲೇ. 'ಇನ್ನೇನು ಭಾರತ ತಂಡ ಸೋತೇ ಹೋಯಿತು' ಎನ್ನುವಂತಹ ಹಲವು ಸಂದರ್ಭಗಳಲ್ಲಿ ಬ್ಯಾಟು ಹಿಡಿದು ಕ್ರೀಸಿಗೆ ಬರುತ್ತಿದ್ದ ಯುವಿ, ತನ್ನ ಸಿಕ್ಸರ್‌ಗಳಿಂದ ಇಡೀ ಪಂದ್ಯದ ಗತಿಯನ್ನು ಬದಲಿಸುತ್ತಿದ್ದುದು ಈತನಿಗೆ ಲಕ್ಷಾಂತರ ಅಭಿಮಾನಿಗಳನ್ನು ಸೃಷ್ಟಿಸಿತ್ತು. 2007ರಲ್ಲಿ ವಿಶ್ವ ಟಿ20 ಪಂದ್ಯವೊಂದರಲ್ಲಿ ಸ್ಟುವರ್ಟ್ ಬ್ರಾಡ್‌ನ ಒಂದೇ ಓವರ್‌ನಲ್ಲಿ ಆರೂ ಎಸೆತಗಳನ್ನು ಸಿಕ್ಸರ್‌ಗೆ ಅಟ್ಟಿದ್ದು ಈತನ ಕ್ರಿಕೆಟ್ ಜೀವನದ ಅವಿಸ್ಮರಣೀಯ ಘಟನೆಗಳಲ್ಲಿ ಒಂದು. ಅದಕ್ಕೂ ಹಿಂದೆ ಹೀಗೆ ಒಂದು ಓವರ್‌ನ ಆರು ಬಾಲ್‌ಗಳನ್ನೂ ಸಿಕ್ಸರ್‌ಗೆ ಎತ್ತಿದ ಘಟನೆ ಸೀನಿಯರ್ ಕ್ರಿಕೆಟ್‌ನಲ್ಲಿ ಎರಡು ಸಲ ನಡೆದಿತ್ತು. ಆದರೆ ಟೆಸ್ಟ್ ಕ್ರಿಕೆಟ್ ಆಡುವ ಎರಡು ತಂಡಗಳ ನಡುವಣ ಅಂತರರಾಷ್ಟ್ರೀಯ ಪಂದ್ಯವೊಂದರಲ್ಲಿ ಇಂತಹ ಸಾಧನೆ ಮಾಡಿದ ಮೊದಲಿಗ ಯುವಿ. ಅದೇ ವರ್ಷ ಇಂಗ್ಲೆಂಡ್ ವಿರುದ್ಧ ಟಿ20 ಪಂದ್ಯವೊಂದರಲ್ಲಿ ಕೇವಲ 12 ಎಸೆತಗಳಲ್ಲಿ ಅರ್ಧಶತಕ ದಾಖಲಿಸಿದ್ದೂ ಯುವಿಯ ಸರ್ವಶ್ರೇಷ್ಠ ಆಟ. ಅತ್ಯಂತ ವೇಗದ ಅರ್ಧಶತಕದ ಆ ದಾಖಲೆಯನ್ನು ಇನ್ನೂ ಯಾರೂ ಮುರಿಯಲಾಗಿಲ್ಲ.

2011ರಲ್ಲಿ ಶ್ವಾಸಕೋಶದ ಕ್ಯಾನ್ಸರ್ ಪತ್ತೆಯಾದ ಬಳಿಕ ಯುವಿಯ ಬದುಕು ಇನ್ನೊಂದು ಮಜಲಿಗೆ ಹೊರಳಿಕೊಂಡಿತು. ಮೈದಾನದಲ್ಲಿ ಆಟದ ನಡುವೆ ಪದೇ ಪದೇ ಕೆಮ್ಮುತ್ತಿದ್ದ, ಉಗುಳುತ್ತಿದ್ದ ಯುವಿಯನ್ನು ಕಂಡವರೆಲ್ಲ ಅನುಮಾನ ಪಟ್ಟಂತೆ ಕ್ಯಾನ್ಸರ್ ಇರುವುದು ದೊಡ್ಡ ಸುದ್ದಿಯಾಯಿತು. ಎದುರಾಳಿಗಳ ಬೌಲಿಂಗ್‌ನಂತೆಯೇ ಅದನ್ನೂ ದಿಟ್ಟತನದಿಂದ ಎದುರಿಸಿದ ಯುವಿ ಒಂದು ವರ್ಷದ ಕಾಲ ಅಮೆರಿಕದಲ್ಲಿ ಚಿಕಿತ್ಸೆ ಪಡೆದುಕೊಂಡು ಮೂರು ಸುತ್ತಿನ ಕೀಮೊಥೆರಪಿ ಮುಗಿಸಿ ಸಂಪೂರ್ಣ ಗುಣವಾದ. ಅಲ್ಲಿಂದೀಚೆಗೆ ಕ್ಯಾನ್ಸರ್ ರೋಗಿಗಳಿಗೆ ನೆರವಾಗುವುದರ ಸಹಿತ ಹಲವು ಚಾರಿಟಿ ಕೆಲಸಗಳಲ್ಲಿ ತೊಡಗಿಕೊಂಡ. ಮರಳಿ ಮೈದಾನಕ್ಕಿಳಿದು ಮತ್ತೆ ಮಿಂಚಿದ. 2014ರಲ್ಲಿ ಬೆಂಗಳೂರಿನ ಆರ್‌ಸಿಬಿ ತಂಡ ಹರಾಜಿನಲ್ಲಿ ಈತನನ್ನು 14 ಕೋಟಿ ರೂಪಾಯಿಗೆ ಖರೀದಿಸಿದ್ದು ಹೊಸ ದಾಖಲೆ ಬರೆಯಿತು. ಅರ್ಜುನ ಮತ್ತು ಪದ್ಮಶ್ರೀ ಪ್ರಶಸ್ತಿ ವಿಜೇತ 'ಪಂಜಾಬಿ ಪುತ್ಥರ್' ಯುವಿ ಈಗ ಮದುವೆ ಆಗುವುದರೊಂದಿಗೆ ಜೀವನದ ಮಹತ್ವದ ಘಟ್ಟ ತಲುಪಿದಂತಾಗಿದೆ. ಮದುವೆ ಸಿಖ್ ಧರ್ಮಗುರುವೊಬ್ಬರ ಸಮ್ಮುಖದಲ್ಲಿ ಅವರದ್ದೇ ಆಶ್ರಮದಲ್ಲಿ ನಡೆದಿರುವುದರಿಂದ ಸಾಂಸ್ಥಿಕ ಧರ್ಮದಲ್ಲಿ ನಂಬಿಕೆ ಇಲ್ಲದಿರುವ ಅಪ್ಪ ಯೋಗರಾಜ್ ಸಿಂಗ್ ಪಾಲ್ಗೊಂಡಿಲ್ಲ! ಶೀಘ್ರದಲ್ಲೇ ಹಿಂದೂ ಸಂಪ್ರದಾಯದಂತೆ ಇನ್ನೊಂದು ಮದುವೆ ನಡೆಯಲಿದೆ ಎನ್ನಲಾಗುತ್ತಿದೆ. ಆಗಲೂ ಅಪ್ಪ ಬರಲಿಕ್ಕಿಲ್ಲ. ಆದರೆ ಅಮ್ಮನ ಮುದ್ದಿನ ಮಗನಾದ ಯುವಿ ಇದಕ್ಕೆಲ್ಲ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ! ಆತ ಹ್ಯಾಝೆಲ್‌ನ ಪ್ರೀತಿಯಲ್ಲಿ ಫುಲ್ ಖುಷ್! ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65